ರುದ್ರಭೂಮಿಯನ್ನು ಗ್ರಾಮಪಂಚಾಯಿತಿಗೆ ಹಸ್ತಾಂತರ ಮಾಡಿ, ಗ್ರಾಮಪಂಚಾಯಿತಿಗೆ ಅನುದಾನವಿಲ್ಲದಿದ್ದಲ್ಲಿ ವಿಶೇಷ ಅನುದಾನವನ್ನು ಒದಗಿಸಿ ಆ ವ್ಯವಸ್ಥೆಯನ್ನು ಮಾಡಿಕೊಡಬೇಕಾಗಿ ವಿನಂತಿ ಮಾಡಿಕೊಳ್ಳುತ್ತೇನೆ.

ಶ್ರೀ ರಮೇಶ್ ಸಿ.ಜಿಗಜಿಣಗಿ: ಮಾನ್ಯ ಅಧ್ಯಕ್ಷರೆ, ಸುಳ್ಯ ತಾಲ್ಲೂಕಿನಲ್ಲಿ ಒಟ್ಟು 41 ಗ್ರಾಮಗಳಿವೆ, ಅದರಲ್ಲಿ 35 ಗ್ರಾಮಗಳಲ್ಲಿ ರುದ್ರಭೂಮಿ ಇದೆ. 6 ಗ್ರಾಮಗಳಿಗೆ ರುದ್ರಭೂಮಿಗೆ ಜಾಗವಿಲ್ಲ. ಈ ಆರು ಹಳ್ಳಿಗಳಿಗೆ ಸಹ ರುದ್ರಭೂಮಿಯನ್ನು ಒದಗಿಸುವ ಕೆಲಸ ಸರ್ಕಾರ ಮಾಡುತ್ತದೆಂದು ಹೇಳುತ್ತೇನೆ. ಅವರು ಕಡಗಲಿ ಎನ್ನತಕ್ಕ ಸ್ಥಳದಲ್ಲಿ ರುದ್ರ ಭೂಮಿ ಇಲ್ಲವೆಂದು ಹೇಳಿದ್ದಾರೆ. ಅಲ್ಲಿ ಸಹ ರುದ್ರಭೂಮಿಯ ವ್ಯವಸ್ಥೆಯನ್ನು ವಿಂಡಿತವಾಗಿ ಮಾಡಿಕೊಡುತ್ತೇನೆ.

ಶ್ರೀ ಎಸ್.ಅಂಗಾರ: 35 ಕಡೆ ರುದ್ರಭೂಮಿ ಇದೆಯೆನ್ನತಕ್ಕ ಅಂಶವನ್ನು ಹೇಳಿದ್ದಾರೆ. ಕೆಲವು ಕಡೆ ರುದ್ರಭೂಮಿಯೇನಿದೆ ಅದನ್ನು ಕೆಲವು ವ್ಯಕ್ತಿಗಳು ಸ್ವಾಧೀನ ಮಾಡಿಕೊಂಡು ಕೃಷಿ ಮಾಡಿದ್ದಾರೆ. ಅವರು 35 ಕಡೆ ಇದೆಯೆಂದು ತಪ್ಪು ಮಾಹಿತಿ ಕೊಟ್ಟಿದ್ದಾರೆ. ನನಗೆ ತಿಳಿದ ಮಾಹಿತಿಯ ಪ್ರಕಾರ 20 ಕಡೆ ರುದ್ರಭೂಮಿ ಇರಬಹುದು.

ಶ್ರೀ ರಮೇಶ್ ಸಿ.ಜಿಗಜಿಣಗಿ:- ಅಧ್ಯಕ್ಷರೆ, ಯಾರ್ಯಾರು ರುದ್ರಭೂಮಿಯ ಜಾಗವನ್ನು ಅಕ್ರಮವಾಗಿ ಸ್ವಾಧೀನಪಡಿಸಿಕೊಂಡಿದ್ದಾರೆ ಅದರ ಬಗ್ಗೆ ಪಟ್ಟಿ ಕೊಟ್ಟರೆ ಅದನ್ನು ಬಿಡಿಸಿಕೊಡುವ ಜವಾಬ್ದಾರಿ ಸರ್ಕಾರದ್ದಾಗಿರುತ್ತದೆ.

ಶ್ರೀ ಎನ್.ಸುರೇಶ್‌ಕುಮಾರ್:- ಸತ್ತವರಿಗೆ ಸ್ಮಶಾನವಿಲ್ಲ, ಬದುಕಿದವರಿಗೆ ನಿವೇಶನವಿಲ್ಲ; ಹೋಲಿಕೆ ಚೆನ್ನಾಗಿದೆ.

ಶ್ರೀ ಎ.ರುಕ್ಮಯ್ಯಪೂಜಾರಿ: ಅಧ್ಯಕ್ಷರೆ, ಇದು ಎಲ್ಲಾ ಕಡೆ ಸಮಸ್ಯೆಯಾಗಿದೆ. ಅಕ್ರಮ ಸಕ್ರಮ ಸಮಸ್ಯೆಯಿಂದಾಗಿ ಎಲ್ಲಾ ಸರ್ಕಾರಿ ಜಾಗಗಳು ಸಹ ಅಕ್ರಮವಾಗಿ ಸ್ವಾಧೀನಪಡಿಸಿಕೊಳ್ಳುವ ಪ್ರವೃತ್ತಿಯಾಗುತ್ತಿದೆ. ಸ್ಮಶಾನಕ್ಕೆ ಭೂಮಿಯನ್ನು ಕಾದಿರಿಸಿದ ಮೇಲೆ ಅದನ್ನು ಗ್ರಾಮಪಂಚಾಯಿತಿಗೆ ಹಸ್ತಾಂತರ ಮಾಡಿ. ಅದಕ್ಕೆ ಬೇಕಾದ ಅನುದಾನವನ್ನು ಸರ್ಕಾರ ಒದಗಿಸಬೇಕು.

ಡಾ: ಎಂ.ಪಿ.ಕರ್ಕಿ:- ನಮ್ಮ ಹೆಗಡೆ ಗ್ರಾಮದಲ್ಲಿ ಇದೇ ರೀತಿ ಸ್ಮಶಾನದ ಜಾಗದಲ್ಲಿ ಮನೆಯನ್ನು ಕಟ್ಟುಕೊಂಡು ಬಿಟ್ಟಿದ್ದಾರೆ. ಅದರ ಬಗ್ಗೆ ಯಾರೂ ಕ್ರಮ ತೆಗೆದುಕೊಳ್ಳಬೇಕೆಂದು ಗೊತ್ತಾಗಿಲ್ಲ.

ಅಧ್ಯಕ್ಷರು: ಮಾನ್ಯ ಸಚಿವರೇ, ಇದನ್ನು ಇಲಾಖೆಯ ಗಮನಕ್ಕೆ ತನ್ನಿ.

ವಿಷಯ: ಕೆ.ಎಸ್.ಆರ್.ಟಿ.ಸಿ. ಬಸ್‌ಗಳಿಂದ ಉಂಟಾದ ಅಪಘಾತಗಳು.

510 (3269)

ಶ್ರೀ ಎ.ರಾಮದಾಸ್ (ಕೃಷ್ಣರಾಜ): ಮಾನ್ಯ ಸಾರಿಗ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕಳೆದ ಮೂರು ವರ್ಷಗಳಲ್ಲಿ ಅಪಘಾತಕ್ಕೆ ಈಡಾಗಿರುವ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯ ಬಸ್ಸುಗಳ ಸಂಖ್ಯೆ ಎಷ್ಟು ಇದರಿಂದ ಎಷ್ಟು ಜನ ಮೃತಪಟ್ಟರುತ್ತಾರೆ?

ಆ) ರಾಜ್ಯ ರಸ್ತೆ ಸಾರಿಗೆ ಸಂಸ್ಥೆ ಅಪಘಾತಕ್ಕೆ ಈಡಾದವರ ಕುಟುಂಬಗಳಿಗೆ ನೀಡಿರುವ ಪರಿಹಾರ ಎಷ್ಟು?

ಇ) ಎಷ್ಟು ಪ್ರಕರಣಗಳಲ್ಲಿ ಚಾಲಕರ ಅಜಾಗರೂಕತೆಯಿಂದ ಅಪಘಾತಗಳು ಸಂಭವಿಸಿವೆ ಎಂದು ತಿಳಿದು ಬಂದಿದೆ? (ಜಿಲ್ಲಾವಾರು ವಿವರ ನೀಡುವುದು)

ಶ್ರೀ ಪಿ.ಜಿ.ಆರ್.ಸಿಂಧ್ಯ (ಸಾರಿಗೆ ಸಚಿವರು):

ಅ) ಕಳೆದ ಮೂರು ವರ್ಷಗಳಲ್ಲಿ (1994-95 ರಿಂದ 1996-97) ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯ 7609 ಬಸ್ಸುಗಳು ಅಪಘಾತಕ್ಕೀಡಾಗಿರುತ್ತವೆ. ಇದರಿಂದ 1559 ಜನ ಮೃತಪಟ್ಟರುತ್ತಾರೆ.

ಆ) ರಾಜ್ಯ ರಸ್ತೆ ಸಾರಿಗೆ ಸಂಸ್ಥೆ ಅಪಘಾತಕ್ಕೆ ಈಡಾದವರ ಕುಟುಂಬಗಳಿಗೆ ಕಳೆದ ಮೂರು ವರ್ಷಗಳಲ್ಲಿ ರೂ. 22,48,43,710-00 ಪರಿಹಾರ ಧನ ನೀಡಿರುತ್ತದೆ.

ಇ) 6238 ಪ್ರಕರಣಗಳಲ್ಲಿ ಚಾಲಕರ ಅಜಾಗರೂಕತೆಯಿಂದ ಅಪಘಾತಗಳು ಸಂಭವಿಸಿವೆ. ವಿಭಾಗವಾರು ವಿವರ ಅನುಬಂಧ ''ಅ''ನಲ್ಲಿ ಮಂಡಿಸಲಾಗಿದೆ.

ವಿಧಾನಸಭಾ ಸದಸ್ಯರಾದ ಶ್ರೀ ಎ.ರಾಮದಾಸ ಅವರ ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ 3269

ಅನುಬಂಧ-ಅ

ಚಾಲಕರ ಅಜಾಗರೂಕತೆಯಿಂದ ಕಳೆದ ಮೂರು ವರ್ಷಗಳಲ್ಲಿ (1994-95ರಿಂದ 1996-97ರವರೆಗೆ) ಸಂಭವಿಸಿದ ಅಪಘಾತ ಪ್ರಕರಣಗಳ ವಿಭಾಗವಾರು ಮಾಹಿತಿ.

	ವಿಭಾಗಗಳು	ವರ್ಷ			ಒಟ್ಟು
		1994-95	1995-96	1996-97	
1)	ಬೆಂಗಳೂರು (ಕೇಂದ್ರ)	165	149	128	442
2)	ಬೆಂಗಳೂರು (ಗ್ರಾ)	57	54	60	171
3)	ಕೋಲಾರ	119	106	86	311
4)	ಮೈಸೂರು	139	155	166	460
5)	ಹಾಸನ	149	122	156	427
6)	ಮಂಗಳೂರು	129	142	118	384
7)	ಉತ್ತರ ಕನ್ನಡ (ಶಿರಸಿ)	132	121	93	346
8)	ಹುಬ್ಬಳ್ಳಿ	132	181	174	487
9)	ಗದಗ	51	45	44	140
10)	ದಾವಣಗೆರೆ	126	118	94	338
11)	ಬೆಳಗಾಂ	222	152	81	455
12)	ಬಿಜಾಪುರ	96	97	75	268
13)	ಬಾಗಲಕೋಟೆ	53	69	62	184
14)	ಗುಲ್ಬರ್ಗಾ	61	56	53	170
15)	ಬೀದರ್	59	50	48	157
16)	ರಾಯಚೂರು	72	63	47	182
17)	ಬಳ್ಳಾರಿ	92	72	55	219
18)	ಬೆಂ.ನ.ಸಾ (ದ)	199	170	143	512
19)	ಬೆಂನ.ಸಾ (ಉ)	209	216	160	585
	ಒಟ್ಟು	2262	2138	1838	6238

ಶ್ರೀ ಎ.ರಾಮದಾಸ್: ಮಾನ್ಯ ಅಧ್ಯಕ್ಷರೆ, ಉತ್ತರವನ್ನು ನೋಡುತ್ತಿದ್ದಂತೆ ಕೆಎಸ್ಆರ್‌ಟಿಸಿಯಲ್ಲಿ ಎಷ್ಟು ಅಪಘಾತವಾಗಿದೆಯೊ ಅದಕ್ಕಿಂತ ಹೆಚ್ಚಿನ ಆಘಾತ ನನಗಾಗಿದೆ. ಕೆಎಸ್ಆರ್‌ಟಿಸಿಯಲ್ಲಿ ಹತ್ತು ಸಾವಿರ ಬಸ್ಸುಗಳಿವೆ. ಅದರೆ ಅಪಘಾತವಾಗುವ ಬಸ್ಸುಗಳ ಸಂಖ್ಯೆ 7,609 ಎಂದು ಹೇಳಿದ್ದಾರೆ. ಶೇಕಡ 75 ಭಾಗ ಬಸ್ಸುಗಳು ಅಪಘಾತವಾಗುತ್ತವೆ. ಇದರಿಂದ ಸಾರಿಗೆ ವ್ಯವಸ್ಥೆಗೆ ಆಗಿರುವ ನಷ್ಟವೆಷ್ಟು? ಸತ್ತವರ ಸಂಖ್ಯೆ 1,559 ಪರಿಹಾರವಾಗಿ 22 ಕೋಟಿ ರೂಪಾಯಿಗಳನ್ನು ಕೊಡಲಾಗಿದೆ, ಇದರಿಂದ ಸಾರಿಗೆ ಸಚಿವರಿಗೆ ಆಘಾತವಾಗಿಲ್ಲವೆ? 6,230 ಪ್ರಕರಣಗಳಲ್ಲಿ ಚಾಲಕರ ನಿರ್ಲಕ್ಷ್ಯದಿಂದ ಅಪಘಾತವಾಗಿದೆಯೆಂದು ಉತ್ತರ ಕೊಟ್ಟಿದ್ದಾರೆ. ಅಲ್ಲಿರುವ ನೌಕರರಿಗೆ ಬಸ್ಸುಗಳು ತಮ್ಮದು ಎನ್ನತಕ್ಕ ಭಾವನೆ ಬಂದಿಲ್ಲವೇ ಎಂದು ಕೇಳಬಯಸುವೆ.

ಶ್ರೀ ಪಿ.ಜಿ.ಆರ್.ಸಿಂಧ್ಯ: ಮಾನ್ಯ ಅಧ್ಯಕ್ಷರೆ, ಮಾನ್ಯ ಸದಸ್ಯರು ಹೇಳಿರುವ ವಿಚಾರದ ಬಗ್ಗೆ ನನಗೂ ತುಂಬಾ ಆತಂಕವಿದೆ. ಅವರು ಹೇಳಿರತಕ್ಕ ವಿಚಾರ ಸರಿಯಾಗಿದೆ. ನಮ್ಮಲ್ಲಿ ಹತ್ತರಿಂದ ಹನ್ನೊಂದು ಸಾವಿರ ಬಸ್ಸುಗಳಿವೆ. ಅದರಲ್ಲಿ 7609 ಬಸ್ಸುಗಳು 1994 ರಿಂದ 1997 ಮೂರು ವರ್ಷಗಳಲ್ಲಿ ಅಪಘಾತಕ್ಕೆ ತುತ್ತಾಗಿವೆ. ಅಂದರೆ ಅಪಘಾತವನ್ನು ನಮ್ಮ ಚಾಲಕರೇ ಮಾಡಿದ್ದಾರೆಂದಲ್ಲ. ಉದಾಹರಣೆಗೆ ನಮ್ಮ ಬಸ್ಸು ನಿಂತಿರುತ್ತದೆ ಯಾವುದೋ ಒಂದು ಲಾರಿ ಬಂದು ಹೊಡೆಯುತ್ತದೆ ಈ ರೀತಿ ಸಹ ಆಗಿರುತ್ತದೆ. ಅದರಲ್ಲಿ ಮೇಜರ್, ಮೈನರ್ ಬಹಳ ಇದೆ. ಮೋಟಾರ್ ವೆಹಿಕಲ್ಸ್ ಕ್ಲೈಮ್ಸ್‌ನ ಪ್ರಕಾರವಾಗಿ ಪರಿಹಾರವನ್ನು ಕೋರ್ಟುಗಳಲ್ಲಿ ಬಂದಿರುವ ತೀರ್ಮಾನದ ಪ್ರಕಾರವಾಗಿ ಈ ಮೂರು ವರ್ಷಗಳಲ್ಲಿ ಸುಮಾರು 22 ಕೋಟಿ ರೂಪಾಯಿಗಳನ್ನು ಪರಿಹಾರದ ರೂಪದಲ್ಲಿ ಕೊಟ್ಟಿದ್ದೇವೆ. ಇದರ ಜೊತೆಗೆ ಸುಮಾರು ಎರಡುಮೂರು ಕೋಟಿ ರೂಪಾಯಿಗಳಷ್ಟು ಹಣ ರಿಪೇರಿಯ ಸಲುವಾಗಿ ಖರ್ಚಾಗಿರುವುದು ನಿಜ. ಇದರ ಬಗ್ಗೆ ನನಗೂ ನೋವಿದೆ. ಬಹಳ ಮುಖ್ಯವಾಗಿ ಚಾಲಕರಿಗೆ ತರಬೇತಿಯನ್ನು ಕೊಡಬೇಕಾಗುತ್ತದೆ. ವೆಹಿಕಲ್ ಕಂಡೀಷನ್ ಸರಿಯಾಗಿ ಇಡಬೇಕಾಗುತ್ತದೆ. ಜೊತೆಗೆ ಶಿಸ್ತು ಇರಬೇಕಾಗುತ್ತದೆ. ಕುಡಿದು ಚಾಲನೆ ಮಾಡುವ ಚಾಲಕರ ಬಗ್ಗೆ ಶಿಸ್ತಿನ ಕ್ರಮ ತೆಗೆದುಕೊಳ್ಳಬೇಕಾಗುತ್ತದೆ. ಅಪಘಾತಗಳಲ್ಲಿ ಇನ್‌ವಾಲ್ವ್ ಆಗಿರುವ ಚಾಲಕರ ಮೇಲೆ ಸಹ ಕ್ರಮ ತೆಗೆದುಕೊಳ್ಳಬೇಕಾಗುತ್ತದೆ. ಹಿಂದಿನ ವರ್ಷಗಳ ಅಂಕಿಅಂಶಗಳನ್ನು ಕೊಡಲು ಹೋಗುವುದಿಲ್ಲ. ಈ ಒಂದು ವರ್ಷದಲ್ಲಿಯೇ ಈ ರೀತಿ ಅಪಘಾತ ಮಾಡಿರುವವರಿಗೆ 425 ಜನರಿಗೆ ಇನ್‌ಕ್ರಿಮೆಂಟ್‌ನ್ನು ನಿಲ್ಲಿಸಿದ್ದೇವೆ. ಸುಮಾರು 775ಜನ ಚಾಲಕರಿಗೆ ಸಂಬಳವನ್ನು ಕಡಿಮೆ ಮಾಡಿದ್ದೇವೆ. 125ಜನ ಚಾಲಕರಿಗೆ ದಂಡವನ್ನು ಹಾಕಿದ್ದೇವೆ. 394 ಜನ ಚಾಲಕರಿಂದ ಕೇರ್‌ಲೆಸ್ ಬಗ್ಗೆ ಕಾಸ್ಟ್‌ನ್ನು ರೆಕವರ್ ಮಾಡಿಕೊಂಡಿದ್ದೇವೆ. 50 ಜನಚಾಲಕರನ್ನು ಕೆಲಸದಿಂದ ಡಿಸ್‌ಮಿಸ್ ಮಾಡಿದ್ದೇವೆ. ಇದಕ್ಕಿಂತ ಹೆಚ್ಚಿನ ಕ್ರಮವನ್ನು ತೆಗೆದುಕೊಳ್ಳಬೇಕೆಂದು ನಾನು ಉದ್ದೇಶವನ್ನಿಟ್ಟುಕೊಂಡಿದ್ದೇನೆ. ಒಂದು ಕಡೆ ಶಿಸ್ತಿನ ಭಾಗ, ಮತ್ತೊಂದು ಕಡೆ ತರಬೇತಿ

ಕೊಡುವುದು, ಈ ಎರಡನ್ನೂ ಮಾಡುತ್ತೇವೆ.

ಶ್ರೀ ಎ.ರಾಮದಾಸ್:- ಮಾನ್ಯ ಅಧ್ಯಕ್ಷರೆ, ಹಿಂದಿನ ಪುಟದಲ್ಲಿ ತಾವೇ ಮಾಹಿತಿ ಕೊಟ್ಟಿದ್ದೀರಿ. ತಾವು ಸಾರಿಗೆ ಸಚಿವರಾಗಿ ಬಂದಮೇಲೆಯೇ 3900 ಅಪಘಾತಗಳಾಗಿದೆ. ಮೂರು ವರ್ಷಗಳಲ್ಲಾಗಿರುವ ಒಟ್ಟು ಅಪಘಾತಗಳ ಸಂಖ್ಯೆ 7,800. ಇರತಕ್ಕ ಬಸ್‌ಗಳಲ್ಲಿ ಶೇಕಡ 75 ಭಾಗ ಅಪಘಾತವಾಗಿರುವುದರ ಬಗ್ಗೆ ನಮಗೆ ಆಘಾತವಾಗುತ್ತಿದೆ.

ಅಧ್ಯಕ್ಷರು: ಅದು ಮೂರು ವರ್ಷಗಳ ಅಂಕಿಅಂಶ. ಅದನ್ನು ವರ್ಷಾವಾರು ವಿಭಾಗ ಮಾಡಿದರೆ 20-25 ಪರ್‌ಸೆಂಟ್ ಬರುತ್ತದೆ.

ಶ್ರೀ ಎ.ರಾಮದಾಸ್:- ಇಂಥ ಪರಿಸ್ಥಿತಿ ನಿರ್ಮಾಣವಾಗಿದೆ. ಇಲ್ಲಿ ಕೊಟ್ಟಿರುವ ಪರಿಹಾರ ಹಣದಲ್ಲೆ 250 ಹೊಸ ಬಸ್‌ಗಳನ್ನು ತೆಗೆದುಕೊಳ್ಳಬಹುದಾಗಿತ್ತು. ತಾವು ಬಂದಮೇಲೆ ಸುಧಾರಣೆಯೇನಾಗಿದೆ ಎಂಬ ಬಗ್ಗೆ ಕೇಳಬಯಸುತ್ತೇನೆ.

ಶ್ರೀ ಪಿ.ಜಿ.ಆರ್.ಸಿಂಧ್ಯ:- ಮಾನ್ಯ ಅಧ್ಯಕ್ಷರೆ, ಇಲ್ಲಿ ವ್ಯವಸ್ಥೆ ತೀರ ಕೆಟ್ಟುಹೋಗಿದೆ. ನಮ್ಮ ಅಧಿಕಾರದ 17 ತಿಂಗಳಿನಲ್ಲಿ ಒಂದೇ ಸಲ ಸುಧಾರಣೆ ಬಯಸತಕ್ಕದ್ದು ಸೂಕ್ತವಲ್ಲ. ಅಪಘಾತಗಳಿಗೆ ನಮ್ಮ ಚಾಲಕರೆ ಕಾರಣವೆಂದು ಹೇಳುವುದಕ್ಕಾಗುವುದಿಲ್ಲ. ನನಗೆ ಗೊತ್ತಿರುವಂತೆ ಸಾರಿಗೆ ಸಂಸ್ಥೆಯಲ್ಲಿ ಕೆಲವು ಜನ ಬಹಳ ಒಳ್ಳೆಯ ಚಾಲಕರು ಇದ್ದಾರೆ. ಅಪಘಾತಗಳಾಗಲು ಬೇರೆ ಕಾರಣಗಳಿದೆ. ಆದ್ದರಿಂದ, ಆ ದೃಷ್ಟಿಯಿಂದ ನಾನು ಕೆಲವು ಕ್ರಮಗಳನ್ನು ತೆಗೆದುಕೊಂಡಿದ್ದೇನೆ.

ಶ್ರೀ ಶಂಕರಲಿಂಗೇಗೌಡ: ಮಾನ್ಯ ಅಧ್ಯಕ್ಷರೆ, ಪಾನಮತ್ತರಾಗಿ ಕೆಂಪು ಹೋರಿಗಳನ್ನು ಓಡಿಸತಕ್ಕವರು ಯಾರ ಮೇಲಾದರೂ ಎಲ್ಲಿಬೇಕಾದರೂ ಹತ್ತಿಸುತ್ತಾರೆ. ಅವರು ಬಸ್‌ಗಳನ್ನು ಓಡಿಸತಕ್ಕದ್ದನ್ನು ನೋಡಿದರೆ ನಾವು ಕಾರಿನಲ್ಲಿ ಹೋಗಬೇಕಾದರೆ ಆ ಕಡೆ, ಈ ಕಡೆ ತೆಗೆದುಕೊಳ್ಳಬೇಕಾಗುತ್ತದೆ. ಒಂದು ರೀತಿ ಡ್ಯಾನ್ಸ್ ಮಾಡಿದಂತಾಗುತ್ತದೆ. ಇಂಥವರ ಮೇಲೆ ಎಷ್ಟು ಕ್ರಮ ತೆಗೆದುಕೊಂಡಿದ್ದಾರೆ? ಪಾನಮತ್ತರಾಗಿ ಬಸ್ಸ್‌ಗಳನ್ನು ಓಡಿಸತಕ್ಕದ್ದು ಶಿಕ್ಷಾರ್ಹ ಅಪರಾಧವೆಂದು ಅವರುಗಳಿಗೆ ತಿಳಿಸಿದ್ದಾರೆಯೇ? ಅಂಥ ಎಷ್ಟು ಜನರಿಗೆ ಶಿಕ್ಷೆಯನ್ನು ಕೊಟ್ಟಿದ್ದಾರೆ?

ಶ್ರೀ ಪಿ.ಜಿ.ಆರ್.ಸಿಂಧ್ಯ:- ಮಾನ್ಯ ಸದಸ್ಯರು, ಇದಕ್ಕೆ ಪ್ರತ್ಯೇಕವಾದ ಪ್ರಶ್ನೆ ಹಾಕಲಿ ಮಾಹಿತಿ ಕೊಡುತ್ತೇನೆ. ಪೋಲೀಸ್ ಇಲಾಖೆ, ಮೋಟಾರ್ ವಾಹನ ಇಲಾಖೆ ಮತ್ತು ಕೆ.ಎಸ್.ಆರ್.ಟಿ.ಸಿ.ಯಲ್ಲಿ ಪಾನಮತ್ತರಾಗಿ ಚಾಲನೆ ಮಾಡುವ ಮತ್ತು ತೆಗೆದುಕೊಂಡಿರುವ ಕ್ರಮಗಳ ಬಗ್ಗೆ ಅಂಕಿಅಂಶವನ್ನು ಒದಗಿಸಿಕೊಡುತ್ತೇನೆ. ಅದರಲ್ಲಿಯೂ ಕೆ.ಎಸ್.ಆರ್.ಟಿ.ಸಿ. ಬಗ್ಗೆ ಹೇಳುವುದಾದರೆ ನಾವು ಡೀ ಅಡಿಕ್ಷನ್

ಕ್ಯಾಂಪ್‌ನ್ನು ತೆಗೆದುಕೊಂಡಿದ್ದೇವೆ. ಸುಮಾರು ಇಪ್ಪತ್ತೈದು ಸಾವಿರ ಜನ ಚಾಲಕರಲ್ಲಿ 1,500 ಜನ ಚಾಲಕರು ವಾಲಂಟರಿಯಾಗಿ ಬಂದು ನಾವು ಕುಡಿಯುತ್ತೇವೆ ಅದನ್ನು ನಿಲ್ಲಿಸಬೇಕೆಂದಿದ್ದೇವೆಂದು ಹೇಳಿದ್ದಾರೆ. ಅವರಿಗೆ ನಾವು ಒಂದು ಅರ್ಜಿಯನ್ನು ಕೊಟ್ಟು ನಮ್ಮ ಒಬ್ಬ ಅಧಿಕಾರಿಯನ್ನು ಅದಕ್ಕಾಗಿ ನೇಮಕ ಮಾಡಿ ರಾಜ್ಯದ ಆರು ಕಡೆಗಳಲ್ಲಿ ಡೀಅಡಿಕ್ಷನ್ ಕ್ಯಾಂಪ್‌ಗಳನ್ನು ಮಾಡಿ ಯಾರು ಕುಡಿತಕ್ಕ ಒಳಗಾಗಿದ್ದಾರೆ ಅವರಿಗೆ ಡ್ರೈವಿಂಗ್ ಕೆಲಸವನ್ನು ಕೊಡದೆ, ಅವರಿಗೆ ಕುಡಿಯುವ ಚಟವನ್ನು ಬಿಡಿಸುವ ಕೆಲಸ ಮಾಡುತ್ತಿದ್ದೇವೆ. ಆಲ್ಲಿಯವರೆಗೆ ಅವರಿಗೆ ಬೇರೆ ಕೆಲಸವನ್ನು ಕೊಡಲು ನಾನು ಕ್ರಮ ತೆಗೆದುಕೊಂಡಿದ್ದೇನೆ.

ಅಧ್ಯಕ್ಷರು: ಈ ಮಧ್ಯೆ ಪ್ರಯಾಣಿಕರ ಸುರಕ್ಷತೆಗಾಗಿ ಹೆಚ್ಚು ರೈಲುಗಳನ್ನು ಬೆಂಗಳೂರಿನಿಂದ ಮೈಸೂರಿಗೆ ಹಾಕಿಸಿದ್ದೇವೆ;

ಶ್ರೀ ಬಿ.ಎಸ್.ಯಡಿಯೂರಪ್ಪ: ಮಾನ್ಯ ಮುಖ್ಯಮಂತ್ರಿಯವರು ಜನತಾದಳದ ಕಾರ್ಯಕರ್ತರ ಸಭೆಯಲ್ಲಿ ಯುವಕರಿಗೆ ಆದೇಶಕೊಡುತ್ತಾ ನಮ್ಮ ವಯಸ್ಸಿನಲ್ಲಿ ಬೇಕಾದರೆ ಕುಡಿಯಿರಿ ಚಿಕ್ಕವಯಸ್ಸಿನಲ್ಲಿ ಕುಡಿದು ಹಾಳಾಗಬೇಡಿ ಎಂದು ಹೇಳಿದ್ದಾರೆ. ಆದ್ದರಿಂದ ವಯಸ್ಸಾದ ಚಾಲಕರಿಗೆ ಕುಡಿಯಬೇಡಿಯೆಂದು ಹೇಗೆ ಹೇಳುತ್ತೀರಿ?

ಶ್ರೀ ಪಿ.ಜಿ.ಆರ್.ಸಿಂಧ್ಯ: ವಯಸ್ಸಾದಮೇಲೆ ಚಾಲನೆ ಮಾಡುವಂತಿರುವುದಿಲ್ಲ. 58 ವರ್ಷ ವಯಸ್ಸಿಗೆ ನಿವೃತ್ತಿಯಾಗಿಬಿಡುತ್ತಾರೆ. ಮುಖ್ಯಮಂತ್ರಿಯವರು 65 ವರ್ಷಗಳಾದ ಮೇಲೆ ಕುಡಿಯಬಹುದು ಎಂದು ಹೇಳಿರತಕ್ಕದ್ದು.

ಅಧ್ಯಕ್ಷರು: ಅವರು ಚಾಲಕರಿಗೆ ಹೇಳಿಲ್ಲ, ಯುವಜನತಾದಳದವರಿಗೆ ಹೇಳಿದ್ದು, ಅದರ ಬಗ್ಗೆ ತಲೆಕೆಡಿಸಿಕೊಳ್ಳಲು ಏಕೆ ಹೋಗುತ್ತೀರಿ?

ಶ್ರೀ ಜೆ.ಹೆಚ್.ಪಟೇಲ್: ಈ ವಿಷಯದಲ್ಲಿ ಪರಿಜ್ಞಾನವೇ ಗೊತ್ತಿಲ್ಲದವರು ಮಾತನಾಡುತ್ತಾರಲ್ಲ ಅದಕ್ಕೆ ನಾನೇನು ಹೇಳಲಿ? ಯಡಿಯೂರಪ್ಪನವರಿಗೆ ಏನು ಗೊತ್ತಿದೆ?

ವಿಷಯ: ಆರಾಧನಾ ಯೋಜನೆಗೆ ಅನುದಾನ ಒದಗಿಸುವುದು.

498 (4029)

ಶ್ರೀ ಕೆ.ಪ್ರಕಾಶ್‌ಚಂದ್ರಶೆಟ್ಟಿ (ಕುಂದಾಪುರ): ಮಾನ್ಯ ಮುಜರಾಯಿ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಆರಾಧನಾ ಯೋಜನೆಯಡಿಯಲ್ಲಿ ದ.ಕ. ಜಿಲ್ಲೆಗೆ ನೀಡಿದ ಅನುದಾನವೆಷ್ಟು?